# IN THE COURT OF THE ADDL. SENIOR CIVIL JUDGE & JMFC., GUBBI

# **OS - 228/2023**

Witness present and duly sworn on : 16.03.2026.

<u>Further cross Examination: by Counsel for Plaintiffs :</u>

ಆಯೋಗದಲ್ಲಿ ಸುಮಾರು 2-3 ಬಾರಿ ವಿಚಾರಣೆ ನಡೆದಿತ್ತು. ಸದರಿ ವಿಚಾರಣೆ ದಿನಾಂಕಃ 27.05.2022 ರಂದು ನಡೆದಿರುತ್ತದೆ. ಅದರ ಪೂರ್ವದಲ್ಲಿ ದಿನಾಂಕಃ 29.04.2022 ರಂದು ವಿಚಾರಣೆ ನಡೆದಿರುತ್ತದೆ. ದಿನಾಂಕಃ 21.03.2018 ರಂದು ನೋಟಿಸ್ ನೀಡಿದ್ದರು. ದಿನಾಂಕಃ 29.04.2022 ರಂದು ವಿಚಾರಣೆಯ ನೋಟಿಸ್ ? ನೀಡಿದ್ದರು. ಸದರಿ ನೋಟಿಸ್ ನೀಡಿದಾಗ ನರಸಿಂಹಯ್ಯನವರು ಮೌತಿ ಆಗಿದ್ದಾರೆಂದು ವರದಿ ನೀಡಿರುತ್ತಾರೆಂದರೆ ಸರಿ. ನರಸಿಂಹಯ್ಯನವರು ಮೌತಿ ಆದ ನಂತರ ಆಯೋಗದಲ್ಲಿ ಅವರ ವಾರಸುದಾರರನ್ನು ಪಕ್ಷಗಾರರನ್ನಾಗಿ ಮಾಡಲಿಲ್ಲ. ಸದರಿ ಆಯೋಗದಲ್ಲಿ ನರಸಿಂಹಯ್ಯ ರವರು ಮೌತಿ ಆಗಿರುವ ಕಾರಣ ಅವರ ವಾರಸುದಾರರನ್ನು ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಲು ನಿರ್ದೇಶನ ನೀಡಿರಲಿಲ್ಲ. ಸಾಕ್ಷಿ ಮುಂದುವರೆದು ನರಸಿಂಹಯ್ಯ ರವರ ಪರವಾಗಿ ಗೋವಿಂದರಾಜು ರವರು ಬಂದಿದ್ದರು. ಸದರಿ ಗೋವಿಂದರಾಜು ನರಸಿಂಹಯ್ಯ ರವರ ಮಗನಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಗೋವಿಂದರಾಜು ರವರು ಸದರಿ ನರಸಿಂಹಯ್ಯ ನವರ ಅಣ್ಣನ ಮಗ. ಗೋವಿಂದರಾಜು ರವರನ್ನು ಪಕ್ಷಗರರರನ್ನಾಗಿ ಸದರಿ ಆಯೋಗದ ಪ್ರಕರಣದಲ್ಲಿ ಸೇರಿಸಿರುವುದಿಲ್ಲ. ಆಯೋಗದಲ್ಲಿ ನಡೆದಿರುವ ವಿಚಾರಣೆಯ ಸಂಪೂರ್ಣ ದಾಖಲೆಗಳನ್ನು ಈ ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಿನಾಂಕಃ 07.06.2022 ರಂದು ಆಯೋಗದಲ್ಲಿ ವಿಚಾರಣೆ ನಡೆದಾಗ ಸ್ಥಳ ಮಹಜರ್ ಮಾಡಲು ಗುಬ್ಬಿಯ ತಹಶೀಲ್ದಾರ್ ರವರಿಗೆ ನಿರ್ದೇಶನ ನೀಡಿದ್ದರು ಎಂದರೆ ಸರಿ. ಸದರಿ ನಿರ್ದೇಶನದಂತೆ ಗುಬ್ಬಿಯ ತಹಶೀಲ್ದಾರ್ ರವರು ಸ್ಥಳ ಪರಿಶೀಲನೆ ಮಾಡಿದಾಗ ಗೌಡೇಗೌಡರವರು ಮೂರು ಜನ ಮಕ್ಕಳು ಅನುಭವದಲ್ಲಿ ಇರುತ್ತಾರೆ ಎಂಬ ವರದಿ ನೀಡಿದ್ದಾರೆಂದರೆ ಸರಿಯಲ್ಲ. ಸದರಿ ತಹಶೀಲ್ದಾರ್ ರವರು MR ಅಂಗೀಕರಣ ಆಗಿರುವ

ಕಾರಣ ಸಕ್ಷಮ ಪ್ರಾಧಿಕಾರದ ಮುಂದೆ ಬಗೆಹರಿಸಿಕೊಳ್ಳಿ ಎಂಬ ಹಿಂಬರಹ ನೀಡಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ತಹಶೀಲ್ದಾರ್ ರವರು ಉಪವಿಭಾಗಾದಿಕಾರಿಗೆ ಲಿಖಿತ ವರದಿ ನೀಡಿರುತ್ತಾರೆ.

MR ರದ್ದು ಮಾಡಲು ಗುಬ್ಬಿಯ ತಹಶೀಲ್ದಾರ್ ಅಥವಾ ಉಪವಿಭಾಗದಿಕಾರಿಯ ಕಛೇರಿಯಿಂದ ನರಸಿಂಹಯ್ಯನವರಿಗೆ ನೋಟಿಸ್ ನೀಡಿದ್ದಾರಾ ಎಂದರೆ ನನಗೆ ಗೊತ್ತಿಲ್ಲ. ಆಯೋಗದಲ್ಲಿ ಯಾವುದೇ ರೀತಿ ಆದೇಶ ಮಾಡದೆ ಇದ್ದರು ಸಹ ನಾವು ಕಂದಾಯ ಅಧಿಕಾರಿಗಳೊಂದಿಗೆ ಶಾಮಿಲಾಗಿ ನರಸಿಂಹಯ್ಯ ರವರ ಹೆಸರಿಗೆ ನಮೂದು ಆಗಿದ್ದ MR ನ್ನು ಕಾನೂನು ಬಾಹಿರವಾಗಿ ಅವರ ಪೌತಿ ಆಗಿದ್ದ ಸಂದರ್ಭದಲ್ಲಿ ರದ್ದು ಮಾಡಿಸಿದ್ದೇವೆಂದರೆ ಸರಿಯಲ್ಲ.

PTCL ಕಾಯ್ದೆ ಯಾವಾಗ ಜಾರಿ ಆಗಿದೆ ಎಂದರೆ ನನಗೆ ನೆನಪಿಲ್ಲ. ಸದರಿ ಕಾಯ್ದೆಯು 1970 ರಲ್ಲಿ ಜಾರಿಯಾಗಿದೆ ಎಂದರೆ ಸರಿ. 1952-60 ರಲ್ಲಿ ದಾವಾ ಆಸ್ತಿಗಳ ಕ್ರಯಪತ್ರ ಆಗಿದೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ PTCL ಕಾಯ್ದೆ ಜಾರಿಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾವು ಯಾವತ್ತಿಗೂ ದಾವಾ ಆಸ್ತಿಯ ಸ್ವಾಧೀನದಲ್ಲಿ ಇರುವುದಿಲ್ಲ ಮತ್ತು ದಾವಾ ಆಸ್ತಿಯು PTCL ಕಾಯ್ದೆಗೆ ಒಳಪಡುವುದಿಲ್ಲ ಆದರೂ ಸಹ ವಾದಿಗಳಿಗೆ ತೊಂದರೆ ಕೊಡಲು ಕಂದಾಯ ಅಧಿಕಾರಿಗಳೊಂದಿಗೆ ಶಾಮಿಲಾಗಿ ದಾಖಲೆಗಳನ್ನು ಸೃಷ್ಟಿಸಿದ್ದೇವೆಂದರೆ ಸರಿಯಲ್ಲ. ನನಗೆ, ನನ್ನ ಕುಟುಂಬದವರಿಗೆ ದಾವಾ ಆಸ್ತಿಯಲ್ಲಿ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**Re examination - Nil**

(Typed to my dictation in open court)

R.O.I & A.C.

Addl. Senior Civil Judge and
JMFC., Gubbi